ಆರ್. ಮಧುಸೂದನ್, ಹಾಸನ

*ಜೊತೆಯಲ್ಲಿ ಹೆಂಡತಿ ಇರುವಾಗ ಪಕ್ಕದಲ್ಲಿ ಬಂದು ನಿಂತ ಸುಂದರಿಯನ್ನು ಕಣ್ತುಂಬಾ ಹೆಂಡತಿಗೆ ತಿಳಿಯದಂತೆ ನೋಡುವುದು ಹೇಗೆ?*



ಹೆಂಡತಿಗೆ ನಾಗಲ್ಸ್‌ನಲ್ಲಿ ಚೆನ್ನಾಗಿ ಕಾಣುವೆ ಎಂದು ಉಬ್ಬಿಸಿ, ನಾಗಲ್ಸ್ ತೊಡಿಸಿ ಸೂಪರ್, ಸೂಪರ್ ಎನ್ನುತ್ತಾ, ನಾಗಲ್ಸ್‌ನಲ್ಲಿ ಸುಂದರಿಯನ್ನು ಕಣ್ತುಂಬಾ ನೋಡಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನೀವು ಕೇಳಿದಿರಿಯಲ್ಲಿ ಉತ್ತರ ನೀಡುವವರು ಬೆಳದಿಂಗಳ ಬಾಲೆಯೇ ಆಗಿರಬೇಕಾ?*

ಹಾಗೇನಿಲ್ಲ; ಅಮಾವಾಸ್ಯೆಯ ರಾತ್ರಿಯಲ್ಲಿ ಕರೆಂಟ್ ಹೋದ ಕಾಲದಲ್ಲಿನ ಕಪ್ಪು ಬೆಕ್ಕೂ ಆಗಬಹುದು!

ವಿ. ಹಮೀದ್, ವಿಟ್ಲ

*ಲವ್ವಿನ ಸಿಗ್ನಲ್ ಕೊಟ್ಟರೂ ಲವ್ವರು ಒಲಿಯುವುದಿಲ್ಲವೇಕೆ?*

ಟವರ್ ಪ್ರಾಬ್ಲಂ; ಸಿಗ್ನಲ್ಲೇ ತಲುಪುತ್ತಿಲ್ಲ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಸರ್ಕಾರವೇ ಭತ್ತ ಬೆಳೆದರೂ ಒಂದು ರೂಪಾಯಿಗೆ ಅಕ್ಕಿ ಕೊಡಲು ಸಾಧ್ಯವೆ?*




ಒಳ್ಳೇ ಕಾಲದಲ್ಲೇ ಆಗದಿದ್ದದ್ದು ಕೊಳ್ಳೇ ಕಾಲದಲ್ಲಿ ಆದೀತೇ...!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಆತ್ಮಹತ್ಯೆ ಮಾಡಿಕೊಳ್ಳುವವರು ಹೇಡಿಗಳೋ, ಧೈರ್ಯವಂತರೋ ಹೇಳುವಿರಾ ರಾಂ?*

ಹುಚ್ಚರು! ಸಾಯಿಸಲೆಂದೇ ಟ್ರೈನಿಂಗ್ ಪಡೆದಿರುವ ಅಷ್ಟೊಂದು ನರ್ಸಿಂಗ್ ಹೋಂಗಳಿರುವಾಗ ಆತ್ಮಹತ್ಯೆ ಅನಗತ್ಯ!

ಎಚ್.ಆರ್. ದೇಸಾಯಿ, ರಾಯಚೂರು

*ದೇವರು ಹುಟ್ಟಿಸಿದ ಮನುಷ್ಯ ಟೆಂಪೊರರಿ, ಮನುಷ್ಯ ಹುಟ್ಟಿಸಿದ ದೇವರು ಪರ್ಮನೆಂಟ್. ಹೀಗೇಕೆ?*

ಅದರಲ್ಲಿ ಮನುಷ್ಯನ ಹೆಚ್ಚುಗಾರಿಕೆ ಇಲ್ಲ. ದೇವನಿಗೆ ಉಳಿದುಕೊಳ್ಳೋ ತಾಕತ್ತಿದೆ, ಉಳಿದುಕೊಳ್ತಾನೆ ಅಷ್ಟೆ!

ಎಂ.ಎನ್.ಸೋಮಶೇಖರ್, ಮೈಸೂರು

*ಅರ್ಚಕನಿಗೂ, ವರ್ತಕನಿಗೂ ಏನು ವ್ಯತ್ಯಾಸ?*

ಅರ್ಚಕನಿಗೆ ಮಂತ್ರ ಮುಖ್ಯ, ವರ್ತಕನಿಗೆ ಮಂತ್ರಾಲೋಚನೆ.

ಕೆ.ಹೆಚ್.ರಾಮಕೃಷ್ಣಾರೆಡ್ಡಿ, ಯಲಹಂಕ

*ನಿಮಗೆ ಎಷ್ಟು ದುಡ್ಡು ಸಿಕ್ಕಿದರೆ ತೃಪ್ತಿ ಆಗುತ್ತದೆ?*

ದುಡಿದಷ್ಟು. ನಿಮಗೆ...?

ಕುಮಾರ ಚಲವಾದಿ, ಶಿರಸಿ

*ಮದುವೆ ಆದ ತಕ್ಷಣ ವನವಾಸ, ನಂತರ ಅಗ್ನಿಪರೀಕ್ಷೆ, ಮತ್ತೆ ವನವಾಸ! ರಾಮರಾಜ್ಯದಲ್ಲಿ ಸೀತೆ ಸುಖವಾಗಿದ್ದದ್ದು ಯಾವಾಗ?*

ಮೊದಲ ವನವಾಸದಲ್ಲೇ; ಹದಿಮೂರು ವರ್ಷ ಫಾರೆಸ್ಟ್ ರೆಸಾರ್ಟ್‌ನಲ್ಲಿ ಹನಿಮೂನ್ ಇಂದಿಗೂ ವರ್ಲ್ಡ್ ರೆಕಾರ್ಡೇ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಬಸವಣ್ಣನವರು ತಮ್ಮನ್ನು ಕುರುಡನ ಮಾಡು, ಕಿವುಡನ ಮಾಡು ಎಂದು ದೇವನಲ್ಲಿ ಮೊರೆ ಹೋಗುವ ಬದಲು ಕಣ್ಣಿಗೆ ಬಟ್ಟೆ, ಕಿವಿಗೆ ಹತ್ತಿ ಬಳಸಬಹುದಿತ್ತಲ್ಲಾ...?*

ನಿಮ್ಮದು ಅಲೋಪತಿಯಂತಹ ಸಲಹೆ; ಆಗಿನವರೆಲ್ಲಾ ಮೂಲದಲ್ಲೇ ಸಮಸ್ಯೆಗೆ ಪರಿಹಾರ ಕಾಣುವ ಆಯುರ್ವೇದೀಯರು!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ರಾಜಕಾರಣಿಗಳು ರಾಜಕೀಯ ಬಿಟ್ಟು ಬೇರೆ ಕ್ಷೇತ್ರಗಳಲ್ಲಿ ಸಮಾಜಸೇವೆ ಮಾಡಲು ಸಾಧ್ಯವಿಲ್ಲವೇ?*

ಇರಬಹುದು. ಆದರೆ ನೊಣಕ್ಕೆ ತಿಪ್ಪೆಯೇ ಆಪ್ಯಾಯಮಾನ.

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ಯಮಧರ್ಮನಿಗೇಕೆ ದೇವಸ್ಥಾನವಿಲ್ಲ?*

ಎಕರೆಗಟ್ಟಲೆ ಜಾಗ ಇರುವವನಿಗೆ ಸೈಟ್ ಬೇಕೆ? ಸುಡುಗಾಡೆಲ್ಲಾ ಅವನದೇ!

## ಬಹುಮಾನಿತ ಪ್ರಶ್ನೆ

ಪಿ.ಜಿ. ರಾಘವೇಂದ್ರ, ಮೈಸೂರು

*ಎಸ್‌ಎಸ್‌ಎಲ್‌ಸಿ ಫಲಿತಾಂಶಕ್ಕೂ, ಚುನಾವಣಾ ಫಲಿತಾಂಶಕ್ಕೂ ಏನು ವ್ಯತ್ಯಾಸ?*

ಚುನಾವಣಾ ಫಲಿತಾಂಶ ಬಂದ ದಿನ ಕೆರೆ ಕಾಲುವೆಗಳ ಬಳಿ ಕಾವಲಿನ ಅಗತ್ಯವಿಲ್ಲ.

ನವಿರವಿ, ಬಾಳೆಹೊನ್ನೂರು

*ತೆಳ್ಳಗಿರುವ ಹಾಲು ಅಷ್ಟು ಗಟ್ಟಿಯಾದ ಮೊಸರು ಹೇಗೆ ಆಗುತ್ತೆ?*

ಇದಕ್ಕೆ ವೈದ್ಯಕೀಯದಲ್ಲಿ ಉತ್ತರವಿದೆ; ಹಾಲಿಗೆ ರಿಗರ್ ಮಾರ್ಟಿಸ್ ಆದರೆ ಮೊಸರು!

ಎಂ.ಸಿ.ಜಯಕಾಂತ, ಮೈಸೂರು

*ಮೇಷ್ಟ್ರು ಹೇಳಿದಾಗ ಸ್ಲೇಟು ಹಿಡಿಯದ ಅನೇಕ ಮಂದಿ ಪೊಲೀಸರು ಹೇಳಿದಾಗ ಹಿಡಿಯುವ ಪರಿಸ್ಥಿತಿ ತಲುಪುತ್ತಾರಲ್ಲಾ...?*

ಲಾಲಿಗೆ ಬಾಗದಿದ್ದರೂ ಲಾಠಿಗೆ ಬಾಗಲೇಬೇಕಲ್ಲ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ಗಂಡನಿಗೆ ಗಂಟು ತೋರಿಸಬಾರದು ಅಂತಾರೆ. ಹಾಗಾದ್ರೆ ಇನ್ನೇನನ್ನು ತೋರಿಸಬೇಕು?*



ಗಂಟುಮುಖ!

ಆರಿಫ್, ದಾವಣಗೆರೆ

*ಅವಲಂಬನೆಯಿಂದ ಸ್ವಾವಲಂಬನೆಯ ಕಡೆಗೆ ಸಾಗಲು ಒಂದು ಸ್ಫೂರ್ತಿದಾಯಕ ಉದಾಹರಣೆ ಕೊಡುವಿರಾ?*

ಕನ್ನಡಿಯಲ್ಲಿ ನೋಡಿಕೊಳ್ಳಿ; ಅಂಬೆಗಾಲಿಡುತ್ತಿದ್ದ ಅಸಹಾಯಕ ಮಗು ಈಗ ನಿಲ್ಲುವ ಮಟ್ಟಕ್ಕೆ ಬಂದಿದೆಯಲ್ಲಾ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ದುಃಖ ಕಡಿಮೆಯಾಗುವುದಕ್ಕೆ ನಿಮ್ಮ ಬಳಿ ಯಾವುದಾದರೂ ಟಾನಿಕ್/ಸಿರಪ್ ಇದೆಯೆ?*

ಕೊಂಚ ಅತ್ತ ನೋಡಿ; ಎಲ್ಲವನ್ನೂ ಪ್ರವಾಹಕ್ಕೆ ಕಳೆದುಕೊಂಡ ಅವಿದ್ಯಾವಂತ ರೋಗಿಷ್ಟ ಶ್ರೀಮಂತನಿಗಿಂತ ನೀವು ಸುಖಿಗಳಲ್ಲವೆ?

■ ರಾಮ್